ಬೆವಿಕಂ
BESCOM

# ಬೆಸ್ಕಾಂ ಸ್ನೇಹಿ

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ ಗೃಹಪತ್ರಿಕೆ

ಸಂಪುಟ-7, ಸಂಚಿಕೆ-1 | ತ್ರೈಮಾಸಿಕ, ಜನವರಿ – ಮಾರ್ಚ್ 2020 | ಪುಟಗಳು-12



**ದಿನಾಂಕ 29.11.2019ರಂದು ನವದೆಹಲಿಯಲ್ಲಿ ರಾಷ್ಟ್ರೀಯ ಮಟ್ಟದಲ್ಲಿ ನಡೆದ SKOCH Summit ನಲ್ಲಿ ಬೆವಿಕಂ ಭಾಗವಹಿಸಿದ್ದು, ಇಂಧನ ಪ್ರವರ್ಗದ ಅಡಿಯಲ್ಲಿ ಈ ಕೆಳಕಂಡ ಪ್ರಾಜೆಕ್ಟ್‌ಗಳ ಅನುಷ್ಠಾನಕ್ಕಾಗಿ SKOCH Energy Award 2019 ಪ್ರಶಸ್ತಿಗಳನ್ನು ಪಡೆದುಕೊಂಡಿದೆ**

**ಸುವರ್ಣ : ಬೆಸ್ಕಾಂ ಡಿಸ್ಟ್ರಿಬ್ಯೂಷನ್ ಆಟೋಮೇಷನ್ ಸಿಸ್ಟಮ್ (DAS)**

**ರಜತ : ಇಂಟಿಗ್ರೇಟೆಡ್ ಪಬ್ಲಿಕ್ ಗ್ರೀವಿಯನ್ಸ್ ರಿಡ್ರೆಸಲ್ ಸಿಸ್ಟಮ್ (i PGRS)**

















# Message from Managing Director



ಆತ್ಮೀಯರಾದ ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಯ ಅಧಿಕಾರಿ ಸಿಬ್ಬಂದಿ ಹಾಗೂ ಸಹೋದ್ಯೋಗಿ ಮಿತ್ರರೆ,

ತಮಗೆಲ್ಲರಿಗೂ 2020 ಹೊಸ ವರ್ಷದ ಮತ್ತು ಸಂಕ್ರಾಂತಿ ಹಬ್ಬದ ಹಾರ್ದಿಕ ಶುಭಾಶಯಗಳು.

'ಯುಗ ಯುಗಾದಿ ಕಳೆದರೂ ಯುಗಾದಿ ಮರಳಿ ಬರುತಿದೆ' ಎನ್ನುತ್ತದೆ ಕವಿವಾಣಿ. ಹಾಗೆಯೇ ವರ್ಷ ಕಳೆದಂತೆಲ್ಲ ಹೊಸ ವರ್ಷವು ಹೊಸ ಭರವಸೆ, ಗುರಿ ಮತ್ತು ಸಂಕಲ್ಪದ ಹಂಬಲದೊಡನೆ ಮರಳಿ ಬರುತ್ತದೆ. ಈ ಹೊಸ ವರ್ಷವನ್ನು ನಾವು ಸಂಭ್ರಮ, ಉತ್ಸಾಹದಿಂದ ಸ್ವಾಗತಿಸೋಣ.

ಬೆಸ್ಕಾಂ ಒಂದು ಬಹುಬೇಡಿಕೆಯ ಗ್ರಾಹಕರನ್ನೊಳಗೊಂಡ ಸೇವಾ ಸಂಸ್ಥೆ. ತನ್ನ ವ್ಯಾಪ್ತಿಯಲ್ಲಿ ಬರುವ ಎಲ್ಲ ಬಗೆಯ ಗ್ರಾಹಕರಿಗೆ ತ್ವರಿತ, ತೃಪ್ತಿಕರ ಮತ್ತು ಗುಣಮಟ್ಟದ ಸೇವೆಯನ್ನು ಒದಗಿಸುವ ಸಂಕಲ್ಪಕ್ಕೆ ಬೆವಿಕಂ ಬದ್ಧವಾಗಿದೆ. ಆ ನಿಟ್ಟಿನಲ್ಲಿ ನಮ್ಮ ಅಧಿಕಾರಿ – ಸಿಬ್ಬಂದಿವರ್ಗವು ಅರ್ಪಣಾ ಮನೋಭಾವದಿಂದ ಕಾರ್ಯತತ್ಪರವಾಗಿರುವುದು ಹೆಮ್ಮೆಯ ವಿಷಯ. ಆದರೆ ಈ ತೃಪ್ತಿಯಲ್ಲಿ ಮೈಮರೆಯದೆ ಎದುರಾಗುವ ಹೊಸ ಸವಾಲುಗಳನ್ನು ಸಮರ್ಥವಾಗಿ ಎದುರಿಸಿ ಗ್ರಾಹಕರಿಗೆ ಇನ್ನೂ ಉತ್ತಮ ಗುಣಮಟ್ಟದ ಸೇವೆಯನ್ನು ಒದಗಿಸುವ ಧ್ಯೇಯಕ್ಕೆ ನಾವು ಹೊಸ ವರ್ಷದಲ್ಲಿ ಪುನರ್‌ಸಮರ್ಪಿಸಿಕೊಳ್ಳೋಣ.

2019ನೇ ವರ್ಷದಲ್ಲಿ ನಮ್ಮ ಕ್ರಿಯಾಶೀಲತೆ ಅನೇಕ ಸಾಧನೆಗಳಲ್ಲಿ ಮತ್ತು ಕ್ರಿಯಾತ್ಮಕ ಕಾರ್ಯಗಳಲ್ಲಿ ಸಂತೃಪ್ತಿ ಕಂಡಿದೆ. ರಾಷ್ಟ್ರೀಯ ಮಟ್ಟದಲ್ಲಿ ನಮ್ಮ ಸಂಸ್ಥೆ ಮಾನ್ಯತೆ ಗಳಿಸಿದೆ. **ದಿನಾಂಕ 29.11.2019** ರಂದು ನವದೆಹಲಿಯಲ್ಲಿ ರಾಷ್ಟ್ರೀಯ ಮಟ್ಟದಲ್ಲಿ ನಡೆದ **SKOCH Summit** ನಲ್ಲಿ ಬೆವಿಕಂ ಭಾಗವಹಿಸಿದ್ದು, ಇಂಧನ ಪ್ರವರ್ಗದ ಅಡಿಯಲ್ಲಿ ಈ ಕೆಳಕಂಡ ಪ್ರಾಜೆಕ್ಟ್‌ಗಳ ಅನುಷ್ಠಾನಕ್ಕಾಗಿ, **SKOCH Energy Award 2019** ಪ್ರಶಸ್ತಿಗಳನ್ನು ಪಡೆದುಕೊಂಡಿದೆ.

**ಸುವರ್ಣ** – ಬೆಸ್ಕಾಂ ಡಿಸ್ಟ್ರಿಬ್ಯೂಷನ್ ಆಟೋಮೇಷನ್ ಸಿಸ್ಟಮ್

**ರಜತ** – ಇಂಟಿಗ್ರೇಟೆಡ್ ಪಬ್ಲಿಕ್ ಗ್ರೀವಿಯನ್ಸ್ ರಿಡ್ರೆಸಲ್ ಸಿಸ್ಟಮ್

ಇದಕ್ಕಾಗಿ ಸಂಬಂಧಪಟ್ಟ ಅಧಿಕಾರಿ ಮತ್ತು ಸಿಬ್ಬಂದಿಗೆ ಅಭಿನಂದನೆಗಳು. ಸಾರ್ವಜನಿಕರಲ್ಲಿ ವಿದ್ಯುತ್ ಸುರಕ್ಷೆ ಬಗ್ಗೆ ಜಾಗೃತಿ ಮೂಡಿಸಲು ಬೆಸ್ಕಾಂ ಹಮ್ಮಿಕೊಂಡಿದ್ದ ಹಲವಾರು ಕಾರ್ಯಕ್ರಮಗಳ ಜೊತೆ, ಎಲ್ಲ ಉಪವಿಭಾಗಗಳಲ್ಲಿ ನುರಿತ ಕಲಾ ತಂಡಗಳಿಂದ ಏರ್ಪಡಿಸಿದ್ದ ಬೀದಿನಾಟಕಗಳು ಜನಪ್ರಿಯತೆ ಪಡೆದವು.

ವಿದ್ಯುತ್‌ಚಾಲಿತ ವಾಹನಗಳಿಗೆ ಇವಿ ಚಾರ್ಜಿಂಗ್ ನಿಲ್ದಾಣಗಳನ್ನು ಹೆಚ್ಚಿಸುವ, ಹಾಗು ಸೌರ ಮೇಲ್ಛಾವಣಿಯ ವಿದ್ಯುತ್ ಉತ್ಪಾದನೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ಮತ್ತಷ್ಟು ಕಾರ್ಯೋನ್ಮುಖರಾಗೋಣ. ಹೊಸವರ್ಷದ ಆರಂಭದ ತಿಂಗಳು ಸಹ ಸಾಲು ಸಾಲು ಹಬ್ಬಗಳ ಅವಧಿ. ಸಂಭ್ರಮಾಚರಣೆಯ ಜೊತೆಗೆ ಸರ್ವರಿಗೂ ಸುಖ, ಸಮೃದ್ಧಿ, ನೆಮ್ಮದಿ, ಆರೋಗ್ಯವನ್ನು ಭಗವಂತ ಕರುಣಿಸಲಿ ಎಂದು ಕೋರೋಣ.

**ಶ್ರೀ ಎಂ. ಬಿ. ರಾಜೇಶ್ ಗೌಡ,**
ವ್ಯವಸ್ಥಾಪಕ ನಿರ್ದೇಶಕರು, ಬೆವಿಕಂ

# ಸಂಪಾದಕೀಯ

ಆತ್ಮೀಯರೆ,

ನಮ್ಮ 'ಬೆಸ್ಕಾಂ ಸ್ನೇಹಿ' ತ್ರೈಮಾಸಿಕ ಈ ಸಂಚಿಕೆಯೊಂದಿಗೆ ಏಳನೇ ವರ್ಷಕ್ಕೆ ಕಾಲಿಡುತ್ತಿದೆ. ನಮ್ಮ ಸಂಸ್ಥೆಯ ಗೃಹ ಪತ್ರಿಕೆಯಾಗಿ ಬೆಸ್ಕಾಂ ವ್ಯಾಪ್ತಿಯ ಎಂಟು ಜಿಲ್ಲೆಗಳ ಅಧಿಕಾರಿ ಹಾಗೂ ಸಿಬ್ಬಂದಿ ವರ್ಗದವರಿಗೆ ಹಲವು ಮಾಹಿತಿಗಳನ್ನು ನೀಡುತ್ತಾ ಬಂದಿದೆ.

ಆದರೆ ಇದನ್ನು ತಮ್ಮೆಲ್ಲರ ಪ್ರಾತಿನಿಧಿಕ ಪತ್ರಿಕೆಯಾಗಿ ತರಬೇಕೆಂಬುದು ನಮ್ಮ ಆಶಯ. ಅದಕ್ಕೆ ತಮ್ಮಿಂದ ಸಕಾರಾತ್ಮಕ ಪ್ರತಿಕ್ರಿಯೆ ಬೇಕು. ತಾವು ಇದನ್ನು ನಮ್ಮ ಮನೆ ಪತ್ರಿಕೆ ಎಂದು ಆತ್ಮೀಯವಾಗಿ ಒಪ್ಪಿಕೊಂಡು ನಿಮ್ಮ ಅನುಭವದ ವ್ಯಾಪ್ತಿಯಲ್ಲಿ ಕಥೆ, ಕವನ, ಪ್ರವಾಸಾನುಭವ, ಮತ್ತಿತರ ವಿಚಾರಗಳ ಬಗ್ಗೆ ಲೇಖನಗಳನ್ನು ಕಳುಹಿಸಿ ಪ್ರೋತ್ಸಾಹಿಸಿದರೆ ಮಾತ್ರ ಅದು ಸಾಧ್ಯ.

ತಮ್ಮೆಲ್ಲರ ಸಲಹೆ ಹಾಗೂ ಸಹಕಾರದಿಂದ 'ಬೆಸ್ಕಾಂ' ರಾಷ್ಟ್ರಮಟ್ಟದಲ್ಲಿ ಪ್ರಶಸ್ತಿ ಪಡೆಯಲು ಸಾಧ್ಯವಾಯಿತು. 2019ರ ನವೆಂಬರ್ 29ರಂದು ನವದೆಹಲಿಯಲ್ಲಿ ನಡೆದ SKOCH ಶೃಂಗ ಸಭೆಯಲ್ಲಿ ಭಾಗವಹಿಸಿದ್ದ 'ಬೆಸ್ಕಾಂ' ಪ್ರತಿಷ್ಠಿತ ಪ್ರಶಸ್ತಿಗಳನ್ನು ಪಡೆಯುವಲ್ಲಿ ಯಶಸ್ವಿಯಾಗಿದೆ. ಬೆಂಗಳೂರು ವಿತರಣಾ ಮೇಲ್ದರ್ಜೆ ಯೋಜನೆ (ಬಿಡಿಯುಪಿ)ಯ ಡಿಸ್ಟ್ರಿಬ್ಯೂಷನ್ ಆಟೋಮೇಷನ್ ಸಿಸ್ಟಮ್‌ಗಾಗಿ ಸುವರ್ಣ ಪದಕವನ್ನು ಪಡೆದಿದೆ.

ಅದೇ ರೀತಿ ಸಾರ್ವಜನಿಕರ ಸಮಸ್ಯೆಗಳಿಗೆ ಸೂಕ್ತ ಪರಿಹಾರ ಒದಗಿಸುವ ವ್ಯವಸ್ಥೆ ಅಡಿಯಲ್ಲಿ (ಐಪಿಜಿಆರ್‌ಎಸ್) ರಜತ ಪ್ರಶಸ್ತಿಯನ್ನು ಗಳಿಸುವ ಮೂಲಕ 'ಬೆಸ್ಕಾಂ' ಕಿರೀಟಕ್ಕೆ ಮತ್ತೊಂದು ಗರಿಯನ್ನು ಮೂಡಿಸಿದೆ.

ಈ ಪ್ರಶಸ್ತಿ ನಮಗೆ ದೊರೆತ ಅತ್ಯುತ್ತಮ ಗೌರವ ಎಂದೇ ಭಾವಿಸಿ ಸ್ವೀಕರಿಸಲಾಗಿದೆ. ಇದನ್ನು ಪಡೆಯುವಲ್ಲಿ ತಮ್ಮೆಲ್ಲರ ಸಹಕಾರವನ್ನು ಮರೆಯುವಂತಿಲ್ಲ. ಆದರೆ ಯಾವುದೇ ಪ್ರಶಸ್ತಿಗಳು ನಮ್ಮ ಜವಾಬ್ದಾರಿಯನ್ನು ಹೆಚ್ಚಿಸುತ್ತವೆ. ಈ ಹಿನ್ನೆಲೆಯಲ್ಲಿ ಇನ್ನಷ್ಟು ಗುರುತರವಾಗಿ ಕಾರ್ಯ ನಿರ್ವಹಿಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ.

ಈ ಸಂದರ್ಭದಲ್ಲಿ ತಮಗೆ ಹಾಗೂ ತಮ್ಮ ಕುಟುಂಬ ವರ್ಗದವರಿಗೆ ಹೊಸ ವರ್ಷದ ಹಾಗೂ ಮಕರ ಸಂಕ್ರಾಂತಿ ಹಬ್ಬದ ಹಾರ್ದಿಕ ಶುಭಾಶಯಗಳು.

ವಂದನೆಗಳೊಂದಿಗೆ.

ಸಂಪಾದಕರು
**ಹೆಚ್. ಎಂ. ಶಿವಪ್ರಕಾಶ್,**
ಪ್ರಧಾನ ವ್ಯವಸ್ಥಾಪಕರು(ಗ್ರಾ. ಸಂ), ಬೆಸ್ಕಾಂ

# ನಮ್ಮ ಊರು, ನಮ್ಮ ಜಿಲ್ಲೆ – ಚಿಕ್ಕಮಗಳೂರು

ಅಪ್ಪಟ ಮಲೆನಾಡು ಮತ್ತು ಬಯಲುಸೀಮೆ ಪ್ರದೇಶಗಳನ್ನು ಹೊಂದಿರುವ ಚಿಕ್ಕಮಗಳೂರು ಜಿಲ್ಲೆ ನಿಸರ್ಗ ಸುಂದರವಾದ ನಾಡು.

ಏಳು ತಾಲ್ಲೂಕುಗಳಿಂದ ಕೂಡಿದ ಈ ಜಿಲ್ಲೆಗೆ ಇತ್ತೀಚೆಗೆ ಎರಡು ಹೊಸ ತಾಲ್ಲೂಕುಗಳನ್ನು ಸೇರಿಸಿ 9 ತಾಲ್ಲೂಕುಗಳನ್ನು ರಚಿಸಲಾಗಿದೆ.

ಚಿಕ್ಕಮಗಳೂರು, ಮೂಡಿಗೆರೆ, ಶೃಂಗೇರಿ, ಕೊಪ್ಪ, ನರಸಿಂಹರಾಜಪುರ, ಕಡೂರು ಮತ್ತು ತರೀಕೆರೆ ತಾಲ್ಲೂಕುಗಳಿಂದ ಕೂಡಿದ್ದ ಜಿಲ್ಲೆಗೆ ಈಗ ಕಳಸ(ಮೂಡಿಗೆರೆ) ಮತ್ತು ಅಜ್ಜಂಪುರ(ತರೀಕೆರೆ) ತಾಲ್ಲೂಕುಗಳನ್ನು ರಚಿಸಿ ಸೇರಿಸಲಾಗಿದೆ.

ಜಿಲ್ಲೆಯ ಒಟ್ಟು ಜನ ಸಂಖ್ಯೆ ಸುಮಾರು 11 ಲಕ್ಷ ತರೀಕೆರೆ, ಕಡೂರು ಮತ್ತು ಅಜ್ಜಂಪುರಗಳು ಬಯಲು ಸೀಮೆಯ ವಾತಾವರಣವನ್ನು ಹೊಂದಿದ್ದರೆ ಉಳಿದವು ಮಲೆನಾಡಿನ ಪ್ರದೇಶಗಳು. ಮಲೆನಾಡು ಭಾಗದಲ್ಲಿ ಕಾಫಿ, ಅಡಿಕೆ, ಭತ್ತ, ಕಾಳುಮೆಣಸುಗಳನ್ನು ಪ್ರಮುಖವಾಗಿ ಬೆಳೆದರೆ, ಬಯಲು ಸೀಮೆ ಪ್ರದೇಶಗಳಲ್ಲಿ ತೆಂಗು, ಈರುಳ್ಳಿ, ಮೆಕ್ಕೆಜೋಳ, ಶೇಂಗಾ, ಮೆಣಸಿನಕಾಯಿಗಳನ್ನು ಬೆಳೆಯಲಾಗುತ್ತದೆ.

ನಿಸರ್ಗ ಸುಂದರವಾದ ಪ್ರವಾಸಿ ತಾಣಗಳಿಗೆ ಹೆಸರಾದ ಈ ಜಿಲ್ಲೆ ಶೃಂಗೇರಿ ಮತ್ತು ಹೊರನಾಡಿನ ಮೂಲಕ ದೇವಾಲಯಗಳಿಗೆ ಪ್ರಸಿದ್ಧಿಯಾಗಿದೆ.



**ಅಯ್ಯನ ಕೆರೆ:** ಚಿಕ್ಕಮಗಳೂರಿಗೆ ಸಮೀಪವಿರುವ ಅಯ್ಯನ ಕೆರೆ ಜಿಲ್ಲೆಯಲ್ಲಿಯೇ ದೊಡ್ಡಕೆರೆ ಮತ್ತು ಸುಂದರ ಪ್ರವಾಸಿತಾಣ. ಏಳು ಬೆಟ್ಟಗಳ ಪ್ರತಿಬಿಂಬವು ಕಾಣುವಂತೆ ಇಟ್ಟ ಕನ್ನಡಿಯಂತೆ ಕಾಣುವುದು ಈ ಕೆರೆ. ಸಾವಿರಾರು ಎಕರೆ ಜಮೀನಿಗೆ ನೀರನ್ನುಣಿಸುತ್ತದೆ.

**ಬಾಬಾಬುಡನ್‌ಗಿರಿ:** ಚಿಕ್ಕಮಗಳೂರಿಗೆ ಸಮೀಪದಲ್ಲಿರುವ ಪರ್ವತ ಶ್ರೇಣಿಯೇ ಬಾಬಾಬುಡನ್‌ಗಿರಿ, ಇದು ಅನನ್ಯ ನಿಸರ್ಗ ಸಂಪತ್ತಿನ ಭಂಡಾರ. ಇಲ್ಲಿಗೆ ಪ್ರವಾಸ ಹೋಗುವುದೇ ಒಂದು ರೋಮಾಂಚಕ ಅನುಭವ.



ಹಸಿರನ್ನೇ ಹೊದ್ದು ನಿಂತ ಗಿರಿಶಿಖರಗಳು ಮಧ್ಯೆ ಶೋಲಾ ಕಾಡುಗಳ ರಮಣೀಯ ನೋಟ. ಕಬ್ಬಿಣದ ಅದಿರು ಸೇರಿದಂತೆ ಹತ್ತಾರು ಬಗೆಯ ಗಿಡ ಮೂಲಿಕೆಗಳ ತವರು.

ಇದು ಹಿಂದು–ಮುಸಲ್ಮಾನರ ಭಾವೈಕ್ಯ ತಾಣವೂ ಆಗಿದೆ.

**ಶೃಂಗೇರಿ:** ತುಂಗಾ ನದಿಯ ದಡದಲ್ಲಿರುವ ಪ್ರಸಿದ್ಧ ತೀರ್ಥಕ್ಷೇತ್ರ ಶೃಂಗೇರಿ ಶಾರದಾಂಬಾ ದೇವಾಲಯ ಭಕ್ತಾದಿಗಳ ಪುಣ್ಯಸ್ಥಳ. ಅದ್ವೈತ ತತ್ವವನ್ನು ಜಗತ್ತಿಗೆ ಸಾರಿದ ಆದಿಶಂಕರಾಚಾರ್ಯರು ಸ್ಥಾಪಿಸಿದ ಶಾರದಾ ಪೀಠ ಪ್ರತಿ ವರ್ಷ ಸಹಸ್ರಾರು ಭಕ್ತರನ್ನು ಆಕರ್ಷಿಸುತ್ತದೆ.

**ಹೊರನಾಡು:** ಕಳಸದಿಂದ ಐದು ಕಿ.ಮೀ ದೂರದಲ್ಲಿರುವ ಹೊರನಾಡು ಕೂಡ ಶಕ್ತಿ ದೇವತೆಗೆ ಹೆಸರಾದ ಸ್ಥಳ. ಇಲ್ಲಿನ ಅನ್ನಪೂರ್ಣೇಶ್ವರಿ ದೇವಾಲಯ ಶೃಂಗೇರಿಯಷ್ಟೇ ಪ್ರಸಿದ್ಧಿ ಪಡೆದಿದೆ.



**ಬಾಳೆ ಹೊನ್ನೂರು ವೀರ ಸಿಂಹಾಸನ ಮಠ:** ಭದ್ರಾ ನದಿಯ ದಂಡೆಯ ಮೇಲಿರುವ ಬಾಳೆಹೊನ್ನೂರಿನಲ್ಲಿ ರಾಜ್ಯದಲ್ಲಿಯೇ ಪ್ರಖ್ಯಾತವಾದ ರಂಭಾಪುರಿ ಮಠ ಇದೆ.

ವೀರಶೈವ ಪಂಚಾಚಾರ್ಯರಲ್ಲಿ ಪ್ರಮುಖರಾದ ರೇಣುಕಾಚಾರ್ಯರು ಸ್ಥಾಪಿಸಿದ ಈ ಮಠವು ರಂಭಾಪುರಿ ಜಗದ್ಗುರುಗಳ ಮಠ ಎಂದೇ ಹೆಸರುವಾಸಿಯಾಗಿದೆ.

ಇಕ್ಕೇರಿ ನಾಯಕರು ಮತ್ತು ಮೈಸೂರು ಅರಸರು ಬಹಳವಾಗಿ ಈ ಮಠಕ್ಕೆ ಮನ್ನಣೆ ನೀಡಿದ್ದಾರೆ.

**ಕೆಮ್ಮಣ್ಣುಗುಂಡಿ ಗಿರಿಧಾಮ:** ನಿಸರ್ಗ ಸೌಂದರ್ಯ ಮತ್ತು ಪ್ರಶಾಂತ ಪರಿಸರದ ಸುಪ್ರಸಿದ್ಧ ಗಿರಿಧಾಮ ಕೆಮ್ಮಣ್ಣುಗುಂಡಿ. ಬೇಸಿಗೆಯ ದಿನಗಳಲ್ಲಿಯೂ ತಂಪನ್ನು ನೀಡುವ ತಾಣ ಇದು. ನೂರಾರು ಬಗೆಯ ಸಸ್ಯರಾಶಿ, ಗಿಡ ಮೂಲಿಕೆಗಳು ಮತ್ತು ಮರಗಳು ಇಲ್ಲಿವೆ.

ಸಹ್ಯಾದ್ರಿ ಶಿಖರದ ಮೇಲಿರುವ ಈ ಗಿರಿಧಾಮದ ಸೊಬಗನ್ನು ಕಂಡು ವಿಸ್ಮಿತರಾಗಿ ಆಗಿನ ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ತಮ್ಮ ಬೇಸಿಗೆಯ ನಿವಾಸ ದತ್ತಾತ್ರೇಯ ಭವನವನ್ನು ಇಲ್ಲಿ ಕಟ್ಟಿಸಿದರು.

**ಕುದುರೆ ಮುಖ ಪರ್ವತ ಶ್ರೇಣಿ:** ಇದು ಪಶ್ಚಿಮಘಟ್ಟ ಸರಣಿಯಲ್ಲಿ ಪ್ರಮುಖ ಪಾತ್ರವನ್ನು ವಹಿಸಿರುವ ಬೆಟ್ಟಗಳ ಶ್ರೇಣಿ.

ಪಶ್ಚಿಮ ಸಮುದ್ರದ ತೀರದಿಂದ ನಿಂತು ನೋಡಿದರೆ ಕುದುರೆಯ ಮುಖದಂತೆ ಕಾಣುವುದರಿಂದ ಈ ಬೆಟ್ಟಗಳ ಗುಂಪಿಗೆ ಈ ಹೆಸರು ಬಂದಿದೆ.

ಕಬ್ಬಿಣದ ಅದಿರಿಗೆ ಪ್ರಸಿದ್ಧಿಯಾಗಿರುವ ಈ ಪರ್ವತದಲ್ಲಿನ ಅಮೂಲ್ಯ ಅರಣ್ಯ ಸಂಪತ್ತು ಬಹಳ ಹೆಸರು ವಾಸಿಯಾಗಿದೆ, ಅನೇಕ ವನ್ಯಜೀವಿಗಳು ಇಲ್ಲಿ ನೆಲೆಸಿವೆ. ಚಾರಣ ಮತ್ತು ನಿಸರ್ಗ ಪ್ರಿಯರಿಗೆ ಇದು ಬಹಳ ಮೆಚ್ಚಿನ ತಾಣವಾಗಿದೆ.

**ಕಿಗ್ಗಾ ಗ್ರಾಮದ ಋಷ್ಯಶೃಂಗ ದೇವಾಲಯ:** ಶೃಂಗೇರಿಯಿಂದ 7 ಕಿ.ಮೀ. ದೂರದಲ್ಲಿರುವ ಕಿಗ್ಗಾ ಎಂಬ ಚಿಕ್ಕಹಳ್ಳಿಯಲ್ಲಿ ಋಷ್ಯಶೃಂಗ ದೇವಾಲಯವಿದೆ. ಮಳೆಯನ್ನು ಕರೆಸುವ ದೇವತೆ ಎಂದು ಪ್ರಖ್ಯಾತಿಯನ್ನು ಪಡೆದಿರುವ ಕೆಲವು ಅಪೂರ್ವ ವಿಗ್ರಹಗಳು ಇಲ್ಲಿವೆ.

ದೇವಾಲಯದ ಶಿಲ್ಪವೂ ಅಪೂರ್ವವಾದದ್ದು. ವರ್ಷಕ್ಕೊಮ್ಮೆ ನಡೆಯುವ ಜಾತ್ರೆಯಲ್ಲಿ ಸಾವಿರಾರು ಜನ ಇಲ್ಲಿ ಸೇರುತ್ತಾರೆ.

**ಕಳಸಾಪುರ–ಕಳಶೇಶ್ವರ ಸ್ವಾಮಿ ದೇವಾಲಯ:** ಚಿಕ್ಕಮಗಳೂರಿನ ಮೂಡಿಗೆರೆ ತಾಲ್ಲೂಕಿನ ಕಳಸಾಪುರವು ದಕ್ಷಿಣ ಕಾಶಿ ಎಂದೇ ಪ್ರಸಿದ್ಧವಾಗಿದೆ.

ಇಲ್ಲಿನ ಕಳಶೇಶ್ವರ, ಅಗಸ್ತ್ಯ ಮಹಾಮುನಿಗಳಿಗೊಲಿದು ಕಾಶಿಯಿಂದ ಇಲ್ಲಿಗೆ ಬಂದು ನೆಲೆಸಿದನೆಂದು ಪುರಾಣಕತೆ ಇದೆ.

ಕಳಸಾಪುರ ನಿತ್ಯ ಹರಿದ್ವರ್ಣದ ಸಸ್ಯರಾಶಿಗಳ ಬೀಡು. ಅಗಸ್ತ್ಯ ಮಹಾಮುನಿಗಳ ಆಶ್ರಮವಿದ್ದ ಸ್ಥಳ.

## ಕರ್ನಾಟಕ ರಾಜ್ಯ ಸರ್ಕಾರದ IT ಮತ್ತು BT ಇಲಾಖೆಯ ವತಿಯಿಂದ ಬೆಂಗಳೂರಿನ ಅರಮನೆ ಮೈದಾನದ ಆವರಣದಲ್ಲಿ ದಿನಾಂಕ 18.11.2019 ರಿಂದ 20.11.2019 ರವರೆಗೆ ಆಯೋಜಿಸಲಾಗಿದ್ದ ಬೆಂಗಳೂರು ಟೆಕ್ ಸಮ್ಮಿಟ್ – 2019 (Bangalore Tech Summit - 2019) ರಲ್ಲಿ ಬೆವಿಕಂ ಭಾಗವಹಿಸಿರುತ್ತದೆ.









# ಮಂಕುತಿಮ್ಮನ ಕಗ್ಗ – ಬಹು ಬಗೆಯ ಜೀವಗತಿ

*ಒಗಟೆಯೇನೀ ಸೃಷ್ಟಿ? ಬಾಳಿನರ್ಥವದೇನು! ।*
*ಬಗೆದು ಬಿಡಿಸುವರಾರು ಸೋಜಿಗವನಿದನು?॥*
*ಜಗವ ನಿರವಿಸಿದ ಕೈಯೊಂದಾದೊಡೇಕಿಂತು?।*
*ಬಗೆ ಬಗೆಯಜೀವಗತಿ ಮಂಕುತಿಮ್ಮ ॥ 6 ॥*



ನಾವಿರುವ ಜಗತ್ತನ್ನು ಗಮನಿಸಿದರೆ ಹೆಜ್ಜೆಹೆಜ್ಜೆಗೂ ಅಚ್ಚರಿಯಲ್ಲದೆ ಇನ್ನೇನೂ ಉಳಿಯದು. ನಿಯತವಾಗಿ ಮೂಡಿರುವ ಸೂರ್ಯ, ವೃದ್ಧಿ–ಕ್ಷಯವಾಗುವ ಚಂದ್ರ, ಇರುಳಲ್ಲಿ ಮಿನುಗುವ ತಾರೆಗಳು ಇವೆಲ್ಲದರ ಜತೆಗೆ ಕ್ಷಣಕ್ಷಣಕ್ಕೂ ಹೊಸದೆನಿಸುವ ಆಕಾಶ. ಇನ್ನು ಭೂಮಿಯಲ್ಲಿ ಪ್ರತಿನಿತ್ಯ ಅನಿರೀಕ್ಷಿತಗಳನ್ನು ಕಾಣುತ್ತೇವೆ. ವ್ಯಕ್ತಿಯು ಕ್ರಿಯಾಶೀಲವಾಗಿ ತೊಡಗಿಸಿಕೊಳ್ಳುವ ಕಾರ್ಯಗಳೆಲ್ಲ ನಿಸರ್ಗ ಪ್ರೇರಿತವಾಗಿಯೇ ಇರುತ್ತದೆ. ಇದುವೇ ಜಗತ್ತಿನ ವೈವಿಧ್ಯತೆಗೆ ಮತ್ತು ಅನನ್ಯತೆಗೆ ಸಾಕ್ಷಿ. ಬದಲಾಗುವ ಋತುಮಾನಗಳು, ವಾತಾವರಣ, ವರ್ಷಧಾರೆ, ನಡುಗಿಸುವ ಕುಳಿರು, ಬೇಸಿಗೆಯಲ್ಲಿ ಬಳಲಿಸುವ ಬಿಸಿಲು ಇವೆಲ್ಲವನ್ನೂ ಅನುಭವಿಸುತ್ತಾ ಮುನ್ನಡೆಯುತ್ತಿದ್ದೇವಲ್ಲ; ನಮ್ಮ ನಡಿಗೆಯೂ ನಿಯಂತ್ರಿಸಲ್ಪಟ್ಟಿಲ್ಲವೆ? ಈ ಬದುಕು ನಾವು ಭಾವಿಸಿದಂತೆಯೇ ಇದೆಯೇ? ಎಲ್ಲೋ ಎಂದೋ ಹುಟ್ಟಿದ್ದೇವೆ. ಹುಟ್ಟಿದ ಮನೆಯಲ್ಲೇ ಬೆಳೆದಿದ್ದರಿಂದ ಅಲ್ಲಿರುವವರ ಜೊತೆಗೆ, ಬಾಂಧವ್ಯಗಳ ಮೂಲಕ ಬೆಸೆದುಕೊಂಡಿದ್ದೇವೆ. ಹುಟ್ಟಿದ ಕೂಡಲೇ ಇನ್ನೊಂದೆಡೆಗೆ ಹಸ್ತಾಂತರವಾಗುತ್ತಿದ್ದರೆ ಸಂಬಂಧಗಳ ಬಳ್ಳಿ ಅಲ್ಲಿ ಹಬ್ಬುತ್ತಿತ್ತೆಂದು ಒಪ್ಪಿಕೊಳ್ಳಲೇಬೇಕಷ್ಟೆ? ಜೀವನದುದ್ದಕ್ಕೂ ನಾನು, ನನ್ನಿಂದ ಎಂಬ ಮೇಲಾಟಕ್ಕೆ ನಿಲ್ಲುತ್ತೇವೆ. ನಿರೀಕ್ಷೆಗಳ ಹಿಂದೆ ಬಿದ್ದು ನಿರಾಶೆಗೊಳಗಾಗುವುದು, ಬಯಕೆಗಳನ್ನು ಬೆಳೆಸುತ್ತ ಭ್ರಮೆಗೊಳಗಾಗುವುದು, ಬದುಕನ್ನು ವ್ಯಾವಹಾರಿಕವಾಗಿಯೋ, ಭಾವನಾತ್ಮಕವಾಗಿಯೋ ನಡೆಸುತ್ತಾ ಕೊನೆಗೊಮ್ಮೆ ನಮಗೇ ಅರಿವಿಲ್ಲವಂತೆ ಸಾವಿನ ತೆಕ್ಕೆಗೆ ಒಪ್ಪಿಸಿಕೊಳ್ಳುತ್ತೇವೆ.

ಹುಟ್ಟಿದ್ದೇಕೆ? ಬವಣೆ ಪಟ್ಟಿದ್ದೇಕೆ? ಸಾವಿಗೆ ಸೆರೆಯಾಗುವುದು ಯಾಕೆ? ಬದುಕಿನ ಉದ್ದೇಶವಾದರೂ ಏನು? ಮುನಿಸು, ಜಗಳ, ಹಗೆ, ನರಳುವಿಕೆ ಇಷ್ಟೇ ಏನು? ಅಳುವಿನ ಹಿಂದೆಯೇ ನಗುವ ಕ್ಷಣಗಳು ಎದುರಾದರೂ ನಮ್ಮ ನೆನಪಿನ ಬೊಗಸೆಯಲ್ಲುಳಿಯುವುದು ಕಹಿಯಷ್ಟೆ ಯಾಕೆ? ನಿನ್ನೆ ಬಂದು, ಇಂದು ಇದ್ದು, ನಾಳೆ ಹೊರಡುವುದಷ್ಟೇ ಈ ಬಾಳುವೆಯೇನು?

ಖಂಡಿತ ಅಲ್ಲ. ಬದುಕಿಗೆ ಸುಂದರ ಅರ್ಥವನ್ನು ನೀಡುವ ಶಕ್ತಿ ನಮ್ಮೊಳಗೇ ಇದೆ. ಅದಕ್ಕಾಗಿ, ಸೃಷ್ಟಿಯ ಬಿಡಿಸಲಾರದ ಒಡಪನ್ನು ಬೆರಗಿನಿಂದ ಕಾಣುತ್ತ ಮನಸ್ಸು ಆನಂದದಿಂದ ತಲೆಬಾಗಬೇಕು. ಪ್ರತಿಯೊಂದರಲ್ಲೂ ಮಿಳಿತವಾಗಿರುವ ದೇವರ ಕೌಶಲವನ್ನು, ವಾತ್ಸಲ್ಯವನ್ನು ಕಾಣುತ್ತ ಧನ್ಯವಾಗಬೇಕು. ಅತ್ಯಂತ ಶ್ರೇಷ್ಠ ಮನುಷ್ಯ ಜನುಮದಲ್ಲಿ ಹುಟ್ಟಿರುವುದು ಹಾಗೆ ಬಂದು ಹೀಗೆ ಎದ್ದು ಹೋಗುವುದಕ್ಕೆ ಅಲ್ಲವೇ ಅಲ್ಲ. ದೇವನ ಸದುದ್ದೇಶವನ್ನು ಪೂರೈಸಲೋಸುಗವೇ ಮಾನವರಾಗಿ ಹುಟ್ಟಿದ್ದೇವೆ. ನಮ್ಮ ಸಂಚಿತ ಕರ್ಮದೋಷಗಳಿಗೆ ಅನುಗುಣವಾಗಿ ಬದುಕು ಬದಲಾಗುತ್ತದೆ. ಹಾಗಾಗಿಯೇ ಈ ಜಗತ್ತನ್ನು ಸೃಷ್ಟಿಸಿದ ಶಕ್ತಿ ಒಂದೇ ಆದರೂ ಜೀವಗಳ ಅರ್ಹತೆಗೆ ಸರಿಯಾಗಿಯೇ ಬದುಕಿನ ಅವಕಾಶಗಳು ಲಭಿಸುತ್ತವೆ. ಸತ್ಕಾರ್ಯ ಮತ್ತು ಸತ್ಸಂಗದಲ್ಲಿ ತೊಡಗಿಸಿಕೊಂಡಾಗ ಪಾಪ ಪರಿಮಾರ್ಜನೆಯಾಗುತ್ತದೆ. ನಾವು ನಿಮಿತ್ತ ಮಾತ್ರರು, ಮಾಡಿಸುವ ಹೊಣೆ ವಿಧಾತನದು ಎಂಬ ಅರಿವು ವ್ಯಕ್ತಿಯನ್ನು ಸನ್ಮಾರ್ಗದಲ್ಲಿ ಮುನ್ನಡೆಸುತ್ತದೆ.

ದೇವರ ಲೀಲೆಯನ್ನು ಅರ್ಥಮಾಡಿಕೊಳ್ಳುವಷ್ಟು ಮತಿವಂತರು ನಾವಲ್ಲ. ಭೂಕಂಪದಿಂದ ಊರಿಗೆ ಊರೇ ನೆಲಸಮವಾದರೂ ಯಾರೋ ಕೆಲವರು ಬದುಕುಳಿಯಬಹುದು. ಇನ್ಯಾರೋ ಆ ತನಕ ಸುರಕ್ಷಿತ ಸ್ಥಳದಲ್ಲಿದ್ದರೂ ಅವಘಡ ಸಂಭವಿಸುವ ಹೊತ್ತಿನಲ್ಲಿ ಅದಕ್ಕೆ ತುತ್ತಾಗಿರಬಹುದು. ಕೆಲವೊಮ್ಮೆ ವೈಪರೀತ್ಯದ ಬಗೆಗಿನ ಮುನ್ಸೂಚನೆಗಳೂ ಏರುಪೇರಾಗಬಹುದು. ಸೃಷ್ಟಿಯ ಚೆಲುವನ್ನು ಮುಗ್ಧಭಾವದಿಂದ ಕಾಣುವ ಮನಃಸ್ಥಿತಿ ಹೊಂದಬೇಕು. ಸೃಷ್ಟಿಯ ಒಗಟಿಗೆ ಉತ್ತರವನ್ನು ಪಡೆಯುವ ಸಾಮರ್ಥ್ಯವಿಲ್ಲದಿದ್ದರೂ, ಅರ್ಥ ಮಾಡಿಕೊಳ್ಳುವ ಯತ್ನದಲ್ಲಿ ಕಿಂಚಿತ್ ಜ್ಞಾನ, ಆನಂದ ನಮ್ಮದಾಗುತ್ತದೆ.ಅದೇ ಬದುಕಿಗೆ ಬೆಳಕಾಗುತ್ತದೆ.

## ಬೆವಿಕಂ ವ್ಯಾಪ್ತಿಯಲ್ಲಿ ಬೆಂಗಳೂರು ಮಹಾ ನಗರ ಕ್ಷೇತ್ರ ವಲಯ ಪ್ರದೇಶದಲ್ಲಿರುವ ಎಚ್.ಟಿ/ಎಲ್.ಟಿ ಮೇಲ್ಮಾರ್ಗಗಳನ್ನು ಭೂಗತ ಕೇಬಲ್/ಏರಿಯಲ್ ಬಂಚ್ ಕೇಬಲ್ ಮಾರ್ಗಗಳನ್ನಾಗಿ ಪರಿವರ್ತಿಸುವದು ಮತ್ತು ಭೂಗತ ಕೇಬಲ್ ಜೊತೆಗೆ ಆಪ್ಟಿಕಲ್ ಫೈಬರ್ ಕೇಬಲ್ ಅಳವಡಿಸುವ ಕುರಿತು

ಮಳೆಗಾಲದಲ್ಲಿ ಮಳೆಗಾಳಿಯಿಂದಾಗಿ ವಿದ್ಯುತ್ ಓವರ್‌ಹೆಡ್ ಲೈನ್‌ಗಳು ಹಾನಿಗೊಳಗಾಗುವುದಲ್ಲದೇ, ವಿದ್ಯುತ್ ಅಡಚಣೆಗಳು ಹಾಗೂ ವಿದ್ಯುತ್ ಅವಘಡಗಳು ಉಂಟಾಗುವ ಸಾಧ್ಯತೆಗಳು ಹೆಚ್ಚಿರುತ್ತವೆ.

ಮುಂಗಾರು ಪೂರ್ವ ಹಾಗು ಮುಂಗಾರು ಮಳೆ ಗಾಳಿಯಿಂದಾಗಿ ಬೆವಿಕಂ ವ್ಯಾಪ್ತಿಯಲ್ಲಿ ಹೆಚ್ಚಿನ ಸಂಖ್ಯೆಯ ಮರಗಳು/ರೆಂಬೆ ಕೊಂಬೆಗಳು ಬಿದ್ದು, ವಿದ್ಯುತ್ ಕಂಬಗಳು ಹಾನಿಗೊಳಗಾಗುವ ಸಂಭವವಿರುತ್ತದೆ. ಈ ಸಂಬಂಧ, ಬೆಂಗಳೂರು ಮಹಾನಗರ ಒಂದರಲ್ಲೇ ಅನೇಕ ಪ್ರದೇಶಗಳಲ್ಲಿ ವಿದ್ಯುತ್ ಅಡಚಣೆಯುಂಟಾಗುತ್ತಿರುತ್ತದೆ. ಆದಕಾರಣ, ಮುಂದಿನ ಮೂರು ವರ್ಷಗಳಲ್ಲಿ ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಪ್ರಸ್ತುತವಿರುವ ಓವರ್ ಹೆಡ್ ಲೈನ್‌ಗಳನ್ನು ಭೂಗತ ಮತ್ತು ಎಬಿ ಕೇಬಲ್‌ಗಳಾಗಿ ಪರಿವರ್ತಿಸುವ ಕಾರ್ಯವನ್ನು ಹಮ್ಮಿಕೊಂಡಿದೆ.

ಸಮಗ್ರವಾಗಿ ಅಧ್ಯಯನ ಮಾಡಿ, ಹೆಚ್ಚಾಗಿ ಮಳೆಗಾಳಿಯ ಸಂದರ್ಭದಲ್ಲಿ ವಿದ್ಯುತ್ ಅಡಚಣೆಯುಂಟಾಗುವ ಪ್ರದೇಶಗಳನ್ನು ಆಯ್ಕೆ ಮಾಡಿ ಮೊದಲನೆಯ ಹಂತದಲ್ಲಿ ಈ ಯೋಜನೆಯ ಅನುಷ್ಠಾನ ಕಾರ್ಯವನ್ನು ಕೈಗೊಳ್ಳಲಾಗುವುದು.

ಈ ಮೇಲಿನ ಎಲ್ಲಾ ಕಾರ್ಯಗಳನ್ನು ಕೈಗೊಳ್ಳುವುದರಿಂದ ನಗರಕ್ಕೆ ಅನಿಯಮಿತ ವಿದ್ಯುತ್ ಸರಬರಾಜು ದೊರಕುವುದಲ್ಲದೆ, ಪ್ರಕೃತಿ ವಿಕೋಪಗಳಿಂದುಂಟಾಗುವ ವಿದ್ಯುತ್ ಅಡಚಣೆಗಳನ್ನು ಕ್ರಮೇಣ ತಡೆಗಟ್ಟಬಹುದಾಗಿದೆ.

# ಡಾ॥ ಬಿ. ಆರ್. ಅಂಬೇಡ್ಕರ್ ರವರ ಮಹಾಪರಿನಿರ್ವಾಣ ದಿನಾಚರಣೆಯನ್ನು ಬೆವಿಕಂ ನಿಗಮ ಕಛೇರಿಯಲ್ಲಿ ದಿನಾಂಕ 6.12.2019 ರಂದು ನೆರವೇರಿಸಲಾಯಿತು









## ಹುಟ್ಟುಹಬ್ಬದ ಶುಭಾಶಯಗಳು

2020ನೇ ವರ್ಷದ ಜನವರಿ, ಫೆಬ್ರವರಿ ಹಾಗೂ ಮಾರ್ಚ್ ತಿಂಗಳಿನಲ್ಲಿ ಹುಟ್ಟುಹಬ್ಬ ಆಚರಿಸಿಕೊಳ್ಳುತ್ತಿರುವ ಬೆಸ್ಕಾಂನ ಅಧಿಕಾರಿಗಳು / ಸಿಬ್ಬಂದಿಗೆ "ಬೆಸ್ಕಾಂ ಸ್ನೇಹಿ"ಯ ಹುಟ್ಟುಹಬ್ಬದ ಹಾರ್ದಿಕ ಶುಭಾಶಯಗಳು.

– ಸಂಪಾದಕೀಯ ಮಂಡಳಿ



## ಹಾರ್ದಿಕ ಬೀಳ್ಕೊಡುಗೆ

ಹತ್ತು ಹಲವು ವರ್ಷ ಸೇವೆ ಸಲ್ಲಿಸಿ ಬೆಸ್ಕಾಂನ ಏಳಿಗೆಗೆ ಶ್ರಮಿಸಿ 2020ನೇ ವರ್ಷದ ಜನವರಿ, ಫೆಬ್ರವರಿ ಹಾಗೂ ಮಾರ್ಚ್ ತಿಂಗಳಿನಲ್ಲಿ ನಿವೃತ್ತಿ ಹೊಂದುತ್ತಿರುವ ಅಧಿಕಾರಿಗಳು / ಸಿಬ್ಬಂದಿಗೆ "ಬೆಸ್ಕಾಂ ಸ್ನೇಹಿ"ಯ ಹಾರ್ದಿಕ ಬೀಳ್ಕೊಡುಗೆ.

– ಸಂಪಾದಕೀಯ ಮಂಡಳಿ

# ಸಾಧಕರು ಇವರು : ಡಾ. ಸಂಧ್ಯಾ ಎಸ್. ಪೈ



ಡಾ. ಸಂಧ್ಯಾ ಎಸ್. ಪೈ

ಡಾ. ಸಂಧ್ಯಾ ಎಸ್. ಪೈ ಅವರದು ಕನ್ನಡ ಪತ್ರಿಕೋದ್ಯಮದಲ್ಲಿ ಚಿರಪರಿಚಿತ ಹೆಸರು.

ಕರ್ನಾಟಕದ ಜನಪ್ರಿಯ ವಾರಪತ್ರಿಕೆ ತರಂಗ ಸೇರಿದಂತೆ ಮಣಿಪಾಲ್ ಮೀಡಿಯಾ ಸಮೂಹದ ಪ್ರತಿಷ್ಠಿತ ನಾಲ್ಕು ಪತ್ರಿಕೆಗಳಾದ ತುಷಾರ (ಮಾಸಿಕ), ಉದಯವಾಣಿ (ಸಾಪ್ತಾಹಿಕ) ಹಾಗೂ ತುಂತುರು (ಮಕ್ಕಳ ಪಾಕ್ಷಿಕ) ಇವುಗಳ ಸಂಪಾದಕಿಯಾಗಿಯೂ ಹೆಸರು ಮಾಡಿದ್ದಾರೆ, ಕನ್ನಡ ಸಾಹಿತ್ಯದ ಹಲವು ಪ್ರಕಾರಗಳಲ್ಲಿ ಕೃತಿಗಳನ್ನು ಸಹ ರಚಿಸಿದ್ದಾರೆ.

ಡಾ. ಪೈ ಅವರು ವಸ್ತು ನಿಷ್ಠತೆಗೆ ಬದ್ಧರಾಗಿ ಹರಿತ ಅಲಗಿನ ಮೇಲೆ ನಡೆಯುವ ಚಾಕಚಕ್ಯತೆ ನಿರೀಕ್ಷಿಸುವ ಪತ್ರಿಕಾ ವ್ಯವಸಾಯವನ್ನು ಚಾಣಾಕ್ಷತೆಯಿಂದ ನಿರ್ವಹಿಸುತ್ತ, ತಮ್ಮ ಕರ್ತವ್ಯವನ್ನು ಅಪ್ರತಿಮ ಶ್ರದ್ಧೆ ಹಾಗೂ ಪ್ರತಿಭೆಗಳಿಂದ ನಿರ್ವಹಿಸಿಕೊಂಡು ಬರುತ್ತಿದ್ದಾರೆ.

ಅವರು ಕೆಲಸದಲ್ಲಿಯೇ ಸಂತೃಪ್ತಿ ಕಂಡುಕೊಂಡು ಪತ್ರಿಕೆಯ ಓದುಗರಿಗೆ ನಿತ್ಯ ಹೊಸ ಹೊಸ ಸಿಹಿಯಾದ ವೈಚಾರಿಕ ಪೂರ್ಣ ಹೂರಣವನ್ನೇ ನೀಡಬೇಕೆಂದು ಹಂಬಲಿಸುತ್ತ ಬಂದವರು.

ಉತ್ತಮ ವಿಚಾರಗಳನ್ನು ಸಮನ್ವಯಗೊಳಿಸಿ ಇಂದಿನ ಬದುಕಿಗೆ ಪ್ರಸ್ತುತವೆನಿಸಿದ ಆರೋಗ್ಯ ಪೂರ್ಣ ಚಿಂತನೆಗಳನ್ನು "ಪ್ರಿಯ ಓದುಗರೇ" ಎಂಬ ತಮ್ಮ ಸಂಪಾದಕೀಯದಲ್ಲಿ "ತರಂಗ" ಓದುಗರಿಗೆ ತಲುಪಿಸುತ್ತಿರುವ ಡಾ. ಸಂದ್ಯಾ ಅವರಲ್ಲಿನ ಸುದೀರ್ಘ ಅಧ್ಯಯನ. ವ್ಯಾಪಕ ಓದು ಹಾಗೂ ವಿಶಾಲ ಜ್ಞಾನ ಎದ್ದು ಕಾಣುತ್ತದೆ.

ಇವರು ರಚಿಸಿ, ನಿರ್ದೇಶಿಸಿದ ಸುಮಾರು 252 ಕಂತುಗಳ 'ಬಿದಿಗೆ ಚಂದ್ರಮ' ಹಾಗೂ 'ಗುಪ್ತಗಾಮಿನಿ' ಕಿರುತೆರೆ ಧಾರವಾಹಿಗಳು ಎಲ್ಲರ ಮನ್ನಣೆಗಳಿಸಿದವು .

ಡಾ. ಸಂಧ್ಯಾ ಪೈ ಅವರ ಪತ್ರಿಕೋದ್ಯಮದ ಕಾರ್ಯಕ್ಷಮತೆಗೆ, ಸಾಧನೆಗೆ ಸಂದ ಪ್ರಶಸ್ತಿ ಪುರಸ್ಕಾರಗಳು ಹಲವಾರು. ಅವುಗಳಲ್ಲಿ ಪ್ರಮುಖವಾದವುಗಳೆಂದರೆ – ಅತ್ತಿಮಬ್ಬೆ ಪ್ರಶಸ್ತಿ, ಶ್ರವಣ ಬೆಳಗೊಳ ಶ್ರೀ ಮಠದ ಸಾಧನಾ ಪ್ರಶಸ್ತಿ, ಕರ್ನಾಟಕ ಮಾಧ್ಯಮ ಅಕಾಡೆಮಿಯ ವಾರ್ಷಿಕ ಪ್ರಶಸ್ತಿ, ಶ್ರೀ ಹೆಚ್.ಕೆ. ವೀರಣ್ಣಗೌಡ ಪತ್ರಿಕೋದ್ಯಮ ಪ್ರಶಸ್ತಿ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ. ಇವೆಲ್ಲವುಗಳಿಗೆ ಮುಕುಟ ಪ್ರಾಯವಾಗಿ ವಿಜಯಪುರದ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯವು ಇವರಿಗೆ ಗೌರವ ಡಾಕ್ಟರೇಟ್ ಪದವಿ ನೀಡಿ ಗೌರವಿಸಿದೆ.

# ಡಾ. ಲತಾ ರಾಜಶೇಖರ್



ಡಾ. ಲತಾ ರಾಜಶೇಖರ್

ಡಾ. ಲತಾ ರಾಜಶೇಖರ್ ಅವರು ಮಂಡ್ಯ ಜಿಲ್ಲೆಯ ಅಂಬಿಗರ ಹಳ್ಳಿಯಲ್ಲಿ 1954ರ ಜೂನ್ 2 ರಂದು ಜನಿಸಿದರು. ಇವರು ಮೈಸೂರು ವಿಶ್ವವಿದ್ಯಾಲಯದಿಂದ ಎಂ.ಎ ಕನ್ನಡ ಹಾಗೂ ಕುವೆಂಪು ಕಾವ್ಯದಲ್ಲಿ ಪ್ರಕೃತಿ – ಒಂದು ಅಧ್ಯಯನ ಎಂಬ ಪ್ರೌಢ ಪ್ರಬಂಧಕ್ಕೆ ಪಿ.ಹೆಚ್.ಡಿ ಪದವಿಯನ್ನು ಪಡೆದಿದ್ದಾರೆ.

ಡಾ. ಲತಾ ಅವರು ಮಹಾಕಾವ್ಯ, ಕಾವ್ಯ, ಕಾದಂಬರಿ, ಸಣ್ಣಕತೆ, ನಾಟಕ, ಸಂಶೋಧನೆ, ಸಂಪಾದನೆ, ಜೀವನಚರಿತ್ರೆ, ಪ್ರವಾಸಕಥನ ಮೊದಲಾದ ಕನ್ನಡ ಸಾಹಿತ್ಯದ ಪ್ರಕಾರಗಳಲ್ಲಿ 50ಕ್ಕೂ ಹೆಚ್ಚಿನ ಕೃತಿಗಳನ್ನು ರಚಿಸಿದ್ದಾರೆ.

ಮಹಾಕಾವ್ಯಗಳ ನಿರ್ಮಾಣ ಕಾರ್ಯಗಳನ್ನು ಒಂದು ವ್ರತದಂತೆ ಕೈಗೊಂಡು ಬುದ್ಧ ಮಹಾದರ್ಶನ, ಏಸು ಮಹಾದರ್ಶನ, ಬಸವ ಮಹಾದರ್ಶನ, ಮಹಾವೀರ ಮಹಾದರ್ಶನ ಹಾಗೂ ಶ್ರೀರಾಮ ಮಹಾದರ್ಶನವೆಂಬ ಐದು ಮಹಾಕಾವ್ಯಗಳನ್ನು ರಚಿಸಿ ನಾಡ ತುಂಬೆಲ್ಲಾ ಪ್ರಸಿದ್ಧರಾಗಿದ್ದಾರೆ.

ಇವರ ಹಲವಾರು ಕೃತಿಗಳು ಹಿಂದಿ, ಇಂಗ್ಲೀಷು, ಉರ್ದು ಮುಂತಾದ ಭಾಷೆಗಳಿಗೆ ಅನುವಾದಗೊಂಡಿವೆ.

30ಕ್ಕೂ ಹೆಚ್ಚಿನ ದೇಶಗಳಲ್ಲಿ ವ್ಯಾಪಕವಾಗಿ ಸಂಚರಿಸಿ ತಮ್ಮ ಜ್ಞಾನಕ್ಷಿತಿಜವನ್ನು ವಿಸ್ತರಿಸಿಕೊಂಡಿದ್ದಾರೆ. ಅನೇಕ ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ವಿಚಾರ ಸಂಕಿರಣಗಳು ಹಾಗೂ ಕಾವ್ಯಗೋಷ್ಠಿಗಳಲ್ಲಿ ಭಾಗವಹಿಸಿದ್ದಾರೆ.

ಸಾಮಾಜಿಕವಾಗಿಯೂ ಸ್ಪಂದಿಸಿ ಅನೇಕ ಉತ್ತಮ ಕಾರ್ಯಗಳನ್ನು ಕೈಗೊಂಡಿರುವುದು ಇವರ ಹೃದಯ ವೈಶಾಲ್ಯತೆಗೆ ಸಾಕ್ಷಿಯಾಗಿದೆ.

ಡಾ. ಲತಾ ರಾಜಶೇಖರ್ ಅವರ ಮುಡಿಗೇರಿದ ಪ್ರಶಸ್ತಿ ಪುರಸ್ಕಾರಗಳು ಅನೇಕ. ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಕೆಂಪೇಗೌಡ ಪುರ ಸ್ಕಾರ, ಅಂತರರಾಷ್ಟ್ರೀಯ ವರ್ಷ ಮಹಿಳಾ ಪ್ರಶಸ್ತಿ, ಭಾರತರತ್ನ ಸರ್. ಎಂ. ವಿಶ್ವೇಶ್ವರಯ್ಯ ಸಾಹಿತ್ಯ ಪ್ರಶಸ್ತಿ, ಕುಲಪತಿ ಕೆ.ಮುನ್ಷಿ ಭಾರತೀಯ ವಿದ್ಯಾಭವನ ಪ್ರಶಸ್ತಿ, ಮಾತೃಶ್ರೀ ಸಾವಿತ್ರಮ್ಮ ದೇಜಗೌ ಪ್ರಶಸ್ತಿ, ಶ್ರೀ ಶಿವರಾತ್ರೀಶ್ವರ ಪ್ರಶಸ್ತಿ, ಡಾ.ಸಂಶಿ ಭೂಸನೂರು ಮಠ ಪ್ರಶಸ್ತಿ, ರತ್ನಾಕರವರ್ಣಿ ಪ್ರಶಸ್ತಿ, ಅತ್ತಿಮಬ್ಬೆ ಕಾವ್ಯ ಪ್ರಶಸ್ತಿ – ಇವೇ ಮೊದಲಾದ ಪ್ರಶಸ್ತಿ ಪುರಸ್ಕಾರಗಳು ಇವರಿಗೆ ಸಂದಿವೆ.

# ಇವರು ನಮ್ಮ ಸಾಹಿತಿಗಳು : ಪ್ರೊ. ರಂ. ಶ್ರೀ. ಮುಗಳಿ

ಕನ್ನಡ ಸಾಹಿತ್ಯದ ಮೇರು ವ್ಯಕ್ತಿಗಳಲ್ಲಿ ಒಬ್ಬರಾದ ಡಾ: ರಂಗನಾಥ ಶ್ರೀನಿವಾಸ ಮುಗಳಿ ಅವರು ಕನ್ನಡ ಸಾಹಿತ್ಯ ಮತ್ತು ಸಂಶೋಧನಾ ಕ್ಷೇತ್ರಕ್ಕೆ ಅಪೂರ್ವ ಕೊಡುಗೆ ನೀಡಿದವರು.

ಧಾರಾವಾಡ ಜಿಲ್ಲೆಯ ಹೊಳೆ ಆಲೂರಿನಲ್ಲಿ 1906ರ ಜುಲೈ 15ರಂದು ಜನಿಸಿದ ಡಾ. ಮುಗಳಿ ಅವರು ಬಾಗಲಕೋಟೆ ಹಾಗೂ ವಿಜಯಪುರ ಜಿಲ್ಲೆಗಳಲ್ಲಿ ಪ್ರಾಥಮಿಕ ಶಿಕ್ಷಣವನ್ನು ಮುಗಿಸಿದರು.

1928ರಲ್ಲಿ ಮುಂಬೈ ವಿಶ್ವವಿದ್ಯಾಲಯದಿಂದ ಬಿ.ಎ., ಪದವಿ ಹಾಗೂ 1930ರಲ್ಲಿ ಬಿ.ಟಿ. ಪದವಿಯನ್ನು ಗಳಿಸಿದರು.

ಸರಳ ಹಾಗೂ ಸಜ್ಜನಿಕೆಯ ಜೀವನಕ್ಕೆ ಹೆಸರಾದ ಅವರು ತಮ್ಮ ವೃತ್ತಿಜೀವನವನ್ನು ಹುಬ್ಬಳ್ಳಿಯ ನ್ಯೂಇಂಗ್ಲಿಷ್ ಹೈಸ್ಕೂಲಿನ ಅಧ್ಯಾಪಕರಾಗಿ ಪ್ರಾರಂಭಿಸಿದರು. ನಂತರ ಸಾಂಗ್ಲಿಯ ವಿಲಿಂಗ್ಡನ್ ಕಾಲೇಜಿನ ಕನ್ನಡ ಪ್ರಾಧ್ಯಾಪಕರಾಗಿ ಆನಂತರ ಅದೇ ಸಂಸ್ಥೆಯ ಪ್ರಾಂಶುಪಾಲರಾಗಿ ಸೇವೆ ಸಲ್ಲಿಸಿದರು.

1966ರಲ್ಲಿ ಆಗಿನ ಮೈಸೂರು ಸರ್ಕಾರದ ಸಾಹಿತ್ಯ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರ ಹೊಣೆಗಾರಿಕೆಯನ್ನೂ ನಿರ್ವಹಿಸಿದರು.

1967ರಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಪ್ರಥಮ ಪ್ರಾಧ್ಯಾಪಕರಾಗಿ ನೇಮಕಗೊಂಡು ಸೇವೆ ಸಲ್ಲಿಸಿದರು.

ರಂ. ಶ್ರೀ. ಮುಗಳಿ ಹಾಗೂ ರಸಿಕ ರಂಗ ಎರಡೂ ಹೆಸರುಗಳಲ್ಲಿ ಬರೆಯುತ್ತಿದ್ದ ಮುಗಳಿಯವರ ಒಟ್ಟು ಕೃತಿಗಳ ಸಂಖ್ಯೆ 50ಕ್ಕೂ ಹೆಚ್ಚಾಗಿದೆ. ಇವುಗಳಲ್ಲಿ ಕಾವ್ಯ, ಕಾದಂಬರಿ, ನಾಟಕ, ಸಣ್ಣಕತೆ, ವಿಮರ್ಶೆ, ಸಂಶೋಧನೆ ಪ್ರಕಾರಗಳು ಮುಖ್ಯವಾಗಿವೆ.


ಪ್ರೊ. ರಂ. ಶ್ರೀ. ಮುಗಳಿ

ಅವರು ರಚಿಸಿದ 'ಕನ್ನಡ ಸಾಹಿತ್ಯ ಚರಿತ್ರೆ' ಕನ್ನಡದ ಮೇರು ಕೃತಿಗಳಲ್ಲಿ ಒಂದಾಗಿದ್ದು ಸಾಹಿತ್ಯವನ್ನು ಅಭ್ಯಾಸ ಮಾಡುವವರಿಗೆ ಪ್ರಮುಖ ಆಕರ ಗ್ರಂಥವಾಗಿದೆ. ಈ ಕೃತಿ ಇಂಗ್ಲಿಷ್ ಹಾಗೂ ಹಲವು ಭಾರತೀಯ ಭಾಷೆಗಳಿಗೂ ಅನುವಾದಗೊಂಡಿದೆ.

ಅವರ ಈ ಗ್ರಂಥಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಹಾಗೂ ಪುಣೆ ವಿಶ್ವವಿದ್ಯಾಲಯ ಗೌರವ ಡಿ.ಲಿಟ್. ಪದವಿ ಲಭ್ಯವಾಗಿವೆ. ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿಗಳೂ ಅವರಿಗೆ ದೊರೆತಿವೆ.

1964ರಲ್ಲಿ ತುಮಕೂರಿನಲ್ಲಿ ನಡೆದ ಅಖಿಲ ಭಾರತದ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿಯೂ ಅವರು ಗೌರವಿಸಲ್ಪಟ್ಟಿದ್ದಾರೆ.

ದೇಶ ವಿದೇಶಗಳ ವ್ಯಾಪಕವಾದ ಪ್ರವಾಸಾನುಭವ, ಪ್ರತಿಷ್ಠಿತ ಸಂಘ-ಸಂಸ್ಥೆಗಳ ಗೌರವ ಸದಸ್ಯತ್ವ, ನಾಡು, ನುಡಿ, ಸಾಹಿತ್ಯಗಳ ನಿರಂತರ ಸೇವೆ ಅವರದ್ದು.

ಸಂಗೀತ ಪ್ರಿಯರೂ ಆಗಿದ್ದ ಡಾ. ಮುಗಳಿ ಅವರು ಸ್ವತ: ವೀಣೆ ಹಾಗೂ ಹಾರ್ಮೋನಿಯಂಗಳನ್ನು ನುಡಿಸಬಲ್ಲವರಾಗಿದ್ದರು.

ಕನ್ನಡಕ್ಕಾಗಿ ಕೈ ಎತ್ತಿದ ಹಿರಿಯ ವಿದ್ವಾಂಸರ ಸಾಲಿನಲ್ಲಿ ಒಬ್ಬರಾಗಿದ್ದ ಅವರು 1993ರ ಫೆಬ್ರುವರಿ 20 ರಂದು ನಿಧನರಾದರು.

# ಡಾ. ಬಿ. ಟಿ. ಲಲಿತಾ ನಾಯಕ್


ಡಾ. ಬಿ. ಟಿ. ಲಲಿತಾ ನಾಯಕ್

ಕನ್ನಡ ಸಾಹಿತ್ಯ, ಸಂಸ್ಕೃತಿ ಮತ್ತು ರಾಜಕೀಯ ಕ್ಷೇತ್ರಗಳಲ್ಲಿ ತಮ್ಮ ಜನಮುಖಿ ಚಿಂತನೆಗಳಿಂದ ಜನಪ್ರಿಯರಾದವರು ಲಲಿತಾನಾಯಕ್ ಅವರು.

ಅವರು ಬರೆದ ಕಥೆ, ಕಾದಂಬರಿ, ನಾಟಕಗಳಲ್ಲಿ ಜಾತೀಯತೆ, ಮಹಿಳೆಯರ ಶೋಷಣೆ, ಬಂಡಾಯದ ದನಿ, ಹಾಗೂ ದಲಿತರ ನೋವುಗಳನ್ನು ಕಾಣಬಹುದು.

ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲ್ಲೂಕಿನ ತಂಗಲಿ ತಾಂಡಾದಲ್ಲಿ 1945ರ ಏಪ್ರಿಲ್4 ರಂದು ಜನಿಸಿದರು. ತಂದೆ ಬಾಲಾಜಿ ನಾಯಕ್ ಮತ್ತು ತಾಯಿ ಗಂಗಾಬಾಯಿ.

ಚಿತ್ರದುರ್ಗದಲ್ಲಿ ಎಂಟನೇ ತರಗತಿವರೆಗೆ ಓದಿದ ಅವರು ನಂತರ ಅವಕಾಶ ವಂಚಿತರಾಗಿ ಮನೆಯಲ್ಲೇ ಅಧ್ಯಯನ ಮುಂದುವರಿಸಿದರು.

ಬಿ.ಎ ಓದುತ್ತಿದ್ದ ಅಣ್ಣನ ಪ್ರೋತ್ಸಾಹದಿಂದ ಕನ್ನಡದ ಜತೆಗೆ ಸಂಸ್ಕೃತ, ಇಂಗ್ಲೀಷ್ ಹಾಗೂ ಹಿಂದಿ ಭಾಷೆಗಳಲ್ಲಿ ಹೆಚ್ಚಿನ ಜ್ಞಾನ ಸಂಪಾದಿಸಿದರು.

'ಚಂದ್ರ ಪರಾಭವ', 'ಭಟ್ಟನ ಕನಸು', ನೆಲೆ-ಬೆಲೆ', 'ಗತಿ', 'ಹಬ್ಬ', 'ಬಲಿ', ಹಾಗೂ 'ನಂರೂಪ್ಲಿ' ಸೇರಿದಂತೆ 20ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ.

ಇವರ ಕಾದಂಬರಿ, ಹಲವು ಕಥೆ ಮತ್ತು ಕವನಗಳು ವಿವಿಧ ವಿಶ್ವವಿದ್ಯಾಲಯಗಳ ವಿವಿಧ ತರಗತಿಗಳಿಗೆ ಪಠ್ಯಗಳಾಗಿವೆ. ಅವರು ರಚಿಸಿದ ನಾಟಕಗಳು ಧಾರವಾಡ ಆಕಾಶವಾಣಿ ಕೇಂದ್ರದಿಂದ ಪ್ರಸಾರಗೊಂಡಿವೆ.

ಖ್ಯಾತ ಪತ್ರಕರ್ತ ಪಿ. ಲಂಕೇಶ್ ಅವರ ಪತ್ರಿಕೆಯಲ್ಲಿ ವರದಿಗಾರ್ತಿಯಾಗಿ ಅಂಕಣಕಾರರಾಗಿ ಕಾರ್ಯ ನಿರ್ವಹಿಸಿದ್ದಾರೆ.

ಅವರ ರಾಜಕೀಯ ಜೀವನ ಆರಂಭವಾಗಿದ್ದು 1986ರಲ್ಲಿ. 1986-92ರವರೆಗೆ ವಿಧಾನ ಪರಿಷತ್ ಮತ್ತು 94-99ರವರೆಗೆ ವಿಧಾನಸಭಾ ಸದಸ್ಯರಾಗಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವೆಯಾಗಿ ಕಾರ್ಯನಿರ್ವಹಿಸಿದ್ದಾರೆ.

ಬಂಜಾರ ಸಮಾಜದ ಹಿನ್ನೆಲೆಯಿಂದ ಬಂದ ಲಲಿತಾ ನಾಯಕ್ ಅವರು ಆ ಸಮಾಜದ ಬದುಕು-ಬವಣೆಗಳನ್ನು ನೇರವಾಗಿ ಕಂಡವರು. ಸಮಾಜದ ಅಭಿವೃದ್ಧಿಗಾಗಿ ಹಲವು ಸಂಘಟನೆಗಳ ನೇತೃತ್ವ ವಹಿಸಿ ಹೋರಾಟ ನಡೆಸಿದ್ದಾರೆ.

ಅವರ ಸಾಹಿತ್ಯ ಸೇವೆ ಹಾಗೂ ಸಾಮಾಜಿಕ ಹೋರಾಟಗಳಿಗೆ ಹತ್ತು ಹಲವು ಪ್ರಶಸ್ತಿಗಳು ಸಂದಿವೆ. ಉತ್ತಮ ಶಾಸಕಿ ಪ್ರಶಸ್ತಿ, ರಾಜೀವ್ ಗಾಂಧಿ ರಾಷ್ಟ್ರೀಯ ಏಕತಾ ಪ್ರಶಸ್ತಿ, ದಾನಚಿಂತಾಮಣಿ ಪ್ರಶಸ್ತಿ, ಸಂಗೊಳ್ಳಿ ರಾಯಣ್ಣ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಅಕ್ಕ ಮಹಾದೇವಿ ಮಹಿಳಾ ವಿಶ್ವವಿದ್ಯಾಲಯ ಪ್ರಶಸ್ತಿಗಳು, ಶ್ರೀಮತಿ ಸಾವಿತ್ರಮ್ಮ ದೇ.ಜ.ಗೌ ಪ್ರಶಸ್ತಿ ಸೇರಿದಂತೆ ಹಲವು ಪ್ರಶಸ್ತಿ-ಪುರಸ್ಕಾರಗಳು ಅವರಿಗೆ ಸಂದಿವೆ.

ಮಹಿಳಾ ಪರ ಮತ್ತು ಸಾಮಾಜಿಕ ಹೋರಾಟಗಳಲ್ಲಿ ಸದಾ ಮುಂಚೂಣಿಯಲ್ಲಿರುವ ಅವರು ಜಾಗೃತ ಸ್ತ್ರೀಯರ ದ್ಯೋತಕವೂ ಆಗಿದ್ದಾರೆ.

# ಯಾರಿಹರಿಲ್ಲಿ...!

ಸೀತೆಯ ಹೊತ್ತೊಯ್ದ ರಾವಣನ ಅಂತ್ಯವಾಯಿತು,
ದ್ರೌಪದಿಯ ಮಾನ ಹರಿಸಿದ ಧುರ್ಯೋಧನನ ವಧೆಯಾಯಿತು,
ಮಿತಿಮೀರಿ ಕೈಹಿಡಿದ ಕೀಚಕನ ಪ್ರಾಣ ಹೋಯಿತು.

ಹೆಣ್ಣಿನ ಮಾನವೆಂಬುದು ಆಟಿಕೆಯಾಯಿತು
ಈ ಕಟುಕರಿಗೆ.
ಅವರ ಕೈಯೊಳು ಸಿಲುಕಿ ಸುಟ್ಟು
ಭಸ್ಮವಾದಳು ಆಕೆ.

ಹೆಣ್ಣನ್ನು ದೇವಿ, ತಾಯಿ ಎಂದು
ಪೂಜಿಸಿದ ಆಚಾರ್ಯರೆಲ್ಲಿ,
ಹೆಣ್ಣಿನ ಮಾನ ಹರಿಸಿದ ಕ್ರೂರಿಗಳ
ವಧಿಸಿದ ವೀರರೆಲ್ಲಿ.

ಕಾಲ ಚಕ್ರದಿ, ಇತಿಹಾಸದ ಗರ್ಭ ಸೇರಿತೆ
ಹೆಣ್ಣಿನ ಬಗೆಗಿನ ಅಭಿಮಾನ.
ಬೆಲೆ ಇಲ್ಲವಾಯಿತೆ...
ಕಟುಕರ ಕಣ್‌ಗಳಲ್ಲಿ ಅವಳ ಮಾನ.

ಸಮಾಜದ ಈ ಅಸಹಿಷ್ಣುತೆಗೆ ಕನ್ನಡಿ ಹಿಡಿಯುವವರ್‍ಯಾರಿಲ್ಲಿ,
ನಿತ್ಯ ಉದಯಿಸುವ ಸೂರ್ಯನೊಂದಿಗೆ ಹುಟ್ಟುತಿಹ ಹೊಸ
ಕೀಚಕರಿಲ್ಲಿ.



**ಕವಿತಾ. ಕೆ**
ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರು
ಜಯನಗರ ವಿಭಾಗ, ಬೆವಿಕಂ

# ಆರೋಗ್ಯವೇ ಭಾಗ್ಯ – ಇಂಗು



ಇಂಗು ತನ್ನದೇ ಆದ ವಿಶಿಷ್ಠ ರೀತಿಯ ಪರಿಮಳ ಉಳ್ಳದ್ದಾಗಿದ್ದು ಅಡುಗೆಯಲ್ಲಿ ಹೆಚ್ಚಾಗಿ ಬಳಕೆಯಾಗುತ್ತದೆ.

ಅಜೀರ್ಣ, ಹೊಟ್ಟೆ ಉಬ್ಬರ, ಉದರ ದೋಷಗಳು ಮತ್ತಿತರ ಸಮಸ್ಯೆಗಳಿಗೆ ಇಂಗು ಪರಿಣಾಮಕಾರಿ ಔಷಧವಾಗಿ ಬಳಕೆಯಾಗುತ್ತದೆ.

ವೀಳ್ಯದೆಲೆ ರಸ, ಈರುಳ್ಳಿ ರಸ, ಜೇನುತುಪ್ಪಗಳ ಜತೆ ಕಡಲೆ ಕಾಳಿನಷ್ಟು ಇಂಗನ್ನು ಬೆರೆಸಿ ಸೇವಿಸುವುದರಿಂದ ನಾಯಿ ಕೆಮ್ಮು, ಬ್ರಾಂಕೈಟೀಸ್, ಉಬ್ಬಸ ಮತ್ತಿತರ ಸಮಸ್ಯೆಗಳು ನಿವಾರಣೆಯಾಗುತ್ತವೆ.

ಕೊಬ್ಬರಿ ಎಣ್ಣೆಯಲ್ಲಿ ಇಂಗನ್ನು ಚೆನ್ನಾಗಿ ಅರೆದು ಸ್ವಲ್ಪ ಬಿಸಿಮಾಡಿ ಸಂಧಿವಾತ ಕೀಲು ನೋವಿರುವ ಭಾಗಕ್ಕೆ ಲೇಪನ ಮಾಡಿದರೆ ನೋವು ನಿವಾರಣೆಗೆ ಇದು ಸಹಕಾರಿ.

ಮೊಡವೆ, ಮತ್ತಿತರ ಬೊಕ್ಕೆಗಳಿಗೆ ಇಂಗನ್ನು ತೇದು ಲೇಪಿಸಿದರೆ ಪರಿಹಾರ ಲಭ್ಯವೆನ್ನಲಾಗಿದೆ.

ಇಂಗು ಔಷಧ ತಯಾರಿಕೆಯಲ್ಲಿ ಹೇರಳವಾಗಿ ಬಳಕೆಯಾಗುತ್ತದೆ.

# ದಾಳಿಂಬೆ ಔಷಧೀಯ ಗುಣವುಳ್ಳ ಹಣ್ಣು.

ಇದರಲ್ಲಿ ಹುಳಿ ಮತ್ತು ಸಿಹಿ ದಾಳಿಂಬೆಗಳೆಂದು ಬೇಧಗಳಿವೆ. ಬೀಜಗಳಿಲ್ಲದ ದಾಳಿಂಬೆಯೂ ಇದೆ.

ಅಲರ್ಜಿ, ಪಿತ್ತಗಂಧೆ, ಕ್ರಿಮಿಕೀಟಗಳ ಕಡಿತದ ಉರಿ ನಿವಾರಿಸುವಲ್ಲಿ ದಾಳಿಂಬೆ ಅದ್ಭುತ ಗುಣವುಳ್ಳದ್ದು.

ಸಿಹಿ ದಾಳಿಂಬೆಯು ಗುಣದಲ್ಲಿ ಉತ್ತಮ. ಹೃದಯಕ್ಕೆ ಹಿತಕಾರಿ, ಪಿತ್ತ ನಿವಾರಕ, ತ್ರಿದೋಷ ಹರ, ಆಮ್ಲ, ವಾತ, ಕಫ ನಾಶಕವೂ ಆಗಿದೆ.



ದಾಳಿಂಬೆ ಸಿಪ್ಪೆ ಸಹ ಔಷಧೀಯ ಗುಣಗಳಿಂದ ಕೂಡಿದ್ದು, ಕೆಮ್ಮು, ಅತಿಸಾರ ಮತ್ತು ಆಮಶಂಕೆಯನ್ನು ನಿವಾರಿಸುತ್ತದೆ.

ಸಿಪ್ಪೆಯನ್ನು ಸಂಗ್ರಹಿಸಿ ಚೂರ್ಣ ಮಾಡಿ ಇಟ್ಟುಕೊಂಡರೆ ಅಗತ್ಯ ಬಿದ್ದಾಗ ಒಂದು ಚಮಚ ಚೂರ್ಣಕ್ಕೆ ಬಿಸಿ ನೀರು ಬೆರೆಸಿ ಕುಡಿಯಬೇಕು.

## ಸಾರ್ವಜನಿಕರಲ್ಲಿ ವಿದ್ಯುತ್ ಸುರಕ್ಷತೆ ಕುರಿತು ಅರಿವು ಮೂಡಿಸಲು ಬೆಂಗಳೂರು ಗ್ರಾಮೀಣ ಕ್ಷೇತ್ರ ವಲಯ ಹಾಗು ಚಿತ್ರದುರ್ಗ ಕ್ಷೇತ್ರ ವಲಯ ವ್ಯಾಪ್ತಿಯಲ್ಲಿ ಬೀದಿ ನಾಟಕಗಳನ್ನು ಪ್ರದರ್ಶಿಸಲಾಯಿತು














## ಸಂಪಾದಕ ಮಂಡಳಿ

| | | |
|---|---|---|
| **ಶ್ರೀ ಎಂ. ಬಿ. ರಾಜೇಶ್ ಗೌಡ,** ವ್ಯವಸ್ಥಾಪಕ ನಿರ್ದೇಶಕರು | | ಅಧ್ಯಕ್ಷರು |
| **ಶ್ರೀ ಡಾ. ಆರ್. ಸಿ. ಚೇತನ್,** ನಿರ್ದೇಶಕರು (ಹಣಕಾಸು) | | ಮುಖ್ಯ ಸಂಪಾದಕರು |
| **ಶ್ರೀ ಜಿ. ಅಶೋಕ್ ಕುಮಾರ್,** ನಿರ್ದೇಶಕರು (ತಾಂತ್ರಿಕ) | | ಮುಖ್ಯ ಸಂಪಾದಕರು |
| **ಶ್ರೀ ಶಿವಪ್ರಕಾಶ್. ಹೆಚ್. ಎಂ.** ಪ್ರಧಾನ ವ್ಯವಸ್ಥಾಪಕರು (ಗ್ರಾ.ಸಂ) | | ಸಂಪಾದಕರು |
| **ಶ್ರೀ ಕೆ. ತಿಪ್ಪೇಸ್ವಾಮಿ,** ಪ್ರಧಾನ ಕಾರ್ಯದರ್ಶಿ, ಕವಿಮಂ ಇಂಜಿನಿಯರುಗಳ ಸಂಘ | | ಸದಸ್ಯರು |
| **ಶ್ರೀ ಕೆ. ಬಲರಾಮ್,** ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ನೌಕರರ ಸಂಘ | | ಸದಸ್ಯರು |
| **ಶ್ರೀ ರಾಮಚಂದ್ರ ರೆಡ್ಡಿ,** ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ಲೆಕ್ಕಾಧಿಕಾರಿಗಳ ಸಂಘ | | ಸದಸ್ಯರು |
| **ಪ್ರಧಾನ ಕಾರ್ಯದರ್ಶಿ,** ಕವಿಪ್ರನಿನಿ ಪ.ಜಾ.ತಿ ಮತ್ತು ಪ.ಪಂಗಡ ಕ್ಷೇಮಾಭಿವೃದ್ಧಿ ಸಂಘ | | ಸದಸ್ಯರು |
| **ಶ್ರೀ ಎಂ. ರವೀಂದ್ರ,** ಕವಿಪ್ರನಿನಿ/ಎಸ್ಕಾಂಗಳ ಪ.ಜಾ.ತಿ. ಮತ್ತು ವರ್ಗದವರ ಅಧಿಕಾರಿಗಳ ಸಂಘ | | ಸದಸ್ಯರು |
| **ಶ್ರೀ ಕುಮಾರ್ ಮುದ್ದಣ್ಣನವರ್,** ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ಡಿಪ್ಲೋಮಾ ಇ. ಸಂಘ | | ಸದಸ್ಯರು |


## ಮನವಿ

**ಬೆಸ್ಕಾಂ ಸ್ನೇಹಿ** ಗೃಹಪತ್ರಿಕೆಯಲ್ಲಿ ಪ್ರಕಟಿಸುವುದಕ್ಕಾಗಿ ನಿಮ್ಮ ಅಭಿಪ್ರಾಯ, ಸಲಹೆ, ಲೇಖನ, ಕಚೇರಿಯಲ್ಲಿ ನಡೆದ ವಿಶೇಷ ಕಾರ್ಯಕ್ರಮ, ಸಾಮಾಜಿಕ ಚಟುವಟಿಕೆಗಳ ಬಗ್ಗೆ ವರದಿಗಳು, ಅಧಿಕಾರಿ/ಸಿಬ್ಬಂದಿ ವರ್ಗದವರ ಸಾಧನೆಗಳ ಬಗ್ಗೆ ಮಾಹಿತಿಗಳನ್ನು ಕಳುಹಿಸಬೇಕಾಗಿ

ವಿಳಾಸ: **ಪ್ರಧಾನ ವ್ಯವಸ್ಥಾಪಕರು (ಗ್ರಾ.ಸಂ.), ನಿಗಮ ಕಾರ್ಯಾಲಯ, ಬೆ.ವಿ.ಕಂ.ನಿ., ಕೆ.ಆರ್. ವೃತ್ತ, ಬೆಂಗಳೂರು-560 001.**

ಇ-ಮೇಲ್ ವಿಳಾಸ: **gmcr@bescom.co.in**

**ವಿದ್ಯುತ್ ಸಂಬಂಧಿತ ಯಾವುದೇ ಸಹಾಯಕ್ಕಾಗಿ 24 ಗಂಟೆಗಳ ಸಹಾಯವಾಣಿ: 1912**
**ಸಂದೇಶ ಕಳುಹಿಸಿ: 58888 ವೆಬ್‌ಸೈಟ್: www.bescom.org**

Printed at : Poornima Printers, Ph. 080 - 23359588